ಜನತಾ ಮಾಧ್ಯಮ

7-12-2017 ಗುರುವಾರ

ಪುಟ-3

# ನಮಗೆ ಗೊತ್ತಿದ್ದರೂ ವಿದ್ಯೋಪದೇಶ ಪಡೆಯಬೇಕು

ಪ್ರಾಚೀನ ಕಾಲದಲ್ಲಿ ಋಷಿ-ಸಂತರಿಗೆ ಏನು ಬೇಕಾದರೂ ಸಾಧಿಸುವ ಶಕ್ತಿ ಇರುತ್ತಿತ್ತು. ಸಾವಿರಾರು ವರ್ಷ ಪರ್ಯಂತ ಅನ್ನ-ನೀರನ್ನು ಸೇವಿಸದೆ ತಪಸ್ಸನ್ನಾಚರಿಸಿ ಅವರು ದೇವರನ್ನು ಒಲಿಸಿಕೊಳ್ಳುತ್ತಿದ್ದರು. ಜನಸಾಮಾನ್ಯನಿಂದ ಮಾಡಲಾಗದ ಈ ಕಾರ್ಯವನ್ನು 'ಮಂತ್ರಬಲ'ದಿಂದ ಅವರು ಸಾಧಿಸುತ್ತಿದ್ದರು. ಒಮ್ಮೆ ವಿಶ್ವಾಮಿತ್ರ ಮುನಿಗಳು ರಾಮನನ್ನು ಯಜ್ಞ ಸಂರಕ್ಷಣೆಗಾಗಿ ಸಿದ್ಧಾಶ್ರಮಕ್ಕೆ ಕರೆದುಕೊಂಡು ಹೋಗುವ ವೇಳೆ ಮಧ್ಯ ಮಾರ್ಗದಲ್ಲಿ 'ಸರಯೂ' ಎಂಬ ಪುಣ್ಯನದಿ ಬಂದಾಗ ಈ ಸ್ಥಳದಲ್ಲಿ ರಾಮನಿಗೆ ವಿದ್ಯೋಪದೇಶ ಮಾಡಲು ನಿರ್ಧರಿಸಿದರು. ಅವರು ರಾಮನನ್ನು ಕರೆದು 'ಬಲಾ' 'ಅತಿಬಲಾ' ಎಂಬ ಮಂತ್ರಗಳನ್ನು ಉಪದೇಶಿಸಿದರು. ಆ ಮಂತ್ರಗಳು ಹಸಿವು-ನೀರಡಿಕೆ, ಶ್ರಮ, ಜ್ವರ ಮುಂತಾದ ಅನಿಷ್ಟಗಳನ್ನು ದೂರ ಮಾಡಿ, ಸರ್ವಾಭೀಷ್ಟಗಳನ್ನು ಪೂರೈಸಬಲ್ಲವಾಗಿದ್ದವು. ಇಂತಹ ಪ್ರಭಾವಶಾಲಿಯಾದ ಮಂತ್ರಗಳಿಂದ ಋಷಿಗಳು ಹಸಿವು, ನೀರಡಿಕೆ ಮುಂತಾದವುಗಳಿಂದ ಬಾಧೆಗೊಳಗಾಗದೆ ಶ್ರಮವಿಲ್ಲದೆ ತಪಸ್ಸನ್ನು ಆಚರಿಸಿ ದೇವರನ್ನು ಒಲಿಸಿಕೊಳ್ಳುತ್ತಿದ್ದರು. ಈ ಮಂತ್ರಗಳನ್ನು ಸರ್ವಜ್ಞನಾದ ರಾಮ ಮೊದಲೇ ತಿಳಿದಿದ್ದ. ಪೂರ್ಣಕಾಮನಾದ ರಾಮನಿಗೆ ಆ ಮಂತ್ರಗಳಿಂದ ಏನೂ ಪ್ರಯೋಜನವಿರಲಿಲ್ಲ, ಆದರೂ ಅವನು ಮಹಾತ್ಮರಿಂದ ಈ ವಿದ್ಯೆಗಳ ಉಪದೇಶ ಪಡೆದುಕೊಂಡ. ನಮಗೆ ವಿದ್ಯೆಯ ಜ್ಞಾನವಿದ್ದರೂ ಸ್ವತಃ ಮಹಾತ್ಮರು ವಿದ್ಯೋಪದೇಶ ಮಾಡಲು ಮುಂದೆ ಬಂದಾಗ ನಮ್ಮ ಜ್ಞಾನವನ್ನು ಬೂದಿ ಮುಚ್ಚಿದ ಕೆಂಡದಂತೆ ಮುಚ್ಚಿಟ್ಟುಕೊಂಡು ಅವರಿಂದ ವಿನೀತನಾಗಿ ವಿದ್ಯೋಪದೇಶ ಪಡೆಯಬೇಕು. ಇದರಿಂದ ನಮ್ಮಲ್ಲಿರುವ ವಿದ್ಯೆ-ಮಂತ್ರಗಳು ದ್ವಿಗುಣಿತವಾಗಿ ಪ್ರಭಾವಶಾಲಿಯಾಗಬಲ್ಲವು ಎಂದು ಲೋಕಕ್ಕೆ ಸೂಚಿಸುವ ಸಲುವಾಗಿ ರಾಮರು ವಿಶ್ವಾಮಿತ್ರರಿಂದ ಬಲಾ-ಅತಿಬಲಾ ಮಂತ್ರಗಳು ತನಗೆ ತಿಳಿದಿದ್ದರೂ ಉಪದೇಶ ಪಡೆದುಕೊಂಡ. ಇದಲ್ಲದೆ ಭಗವಂತನಾದ ತನಗೆ ಅರ್ಪಿಸಿ ವಿಶ್ವಾಮಿತ್ರರು ಮಂತ್ರಗಳ ಪ್ರಭಾವವನ್ನು ವೃದ್ಧಿಸಿಕೊಳ್ಳಲಿ ಎಂಬ ಸದುದ್ದೇಶವೂ ಅವನಿಗಿತ್ತು. ದೇವತೆಗಳೂ ಲೋಕ ಹಿತಾರ್ಥವಾಗಿ ಭೂಮಿಯಲ್ಲಿ ಅವತರಿಸಿದಾಗ ಜ್ಞಾನ, ಮಹಿಮೆಗಳನ್ನು ತೋರ್ಪಡಿಸಿ ತನ್ನಂತೆಯೇ ಸರಳವಾಗಿ ವರ್ತಿಸಿ ಗುರುವನ್ನು ಆಶ್ರಯಿಸಿ, ಸೇವೆ ಮಾಡಿ ವಿದ್ಯೋಪದೇಶ ಪಡೆಯಬೇಕೆಂಬುದು ರಾಮನ ಸಂದೇಶ.

-ಶ್ರೀ ವಿದ್ಯೇಶತೀರ್ಥ ಶ್ರೀಪಾದರು

**ವಿಚಾರ ಬಿಂದು:** ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸುತ್ತಾನೆ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಬೇರೆ ಇಲ್ಲ ಎಂದು ತಿಳಿದುಕೊಂಡಿರುತ್ತಾನೆ. -ಕುವೆಂಪು

# ಪ್ರವಾಸಿಗರ ತಂಗುದಾಣಗಳಾಗುತ್ತಿರುವ ಸಮ್ಮೇಳನಗಳು

ಚಂಪಾರವರಿಗೆ 83ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಎಂದಾಗಲೆ ಅವರನ್ನು ಬಲ್ಲ ಓದುಗರು ವಿವಾದಗಳನ್ನು ನಿರೀಕ್ಷಿಸಿದ್ದರು. 'ಒಳ್ಳೆಯ ಲೇಖಕ ಆದರೆ ಕೆಟ್ಟ ನಾಲಿಗೆಯವ' ಎಂದು ತಮ್ಮನ್ನು ಛೇಡಿಸಿಕೊಳ್ಳುವ ಅವರು ಮೊದಲಿನಿಂದಲೂ ನಾಲಗೆಯನ್ನು ಕತ್ತಿಯಂತೆ ಝಳಪಿಸುತ್ತಾ ಬಂದವರು. ಬೇಂದ್ರೆ, ಶಂಭಾ ಜೋಶಿಯಂಥಾ ಹಿರಿಯರಿಂದ ಹಿಡಿದು ಸರೀಕರಾದ ಯು.ಆರ್. ಅನಂತಮೂರ್ತಿ, ಲಂಕೇಶ್, ತಮ್ಮ ಕಾವ್ಯ ಗುರುಗಳಾದ ಅಡಿಗರು, ತಮಗಿಂತ ಕಿರಿಯವರಾದ ಕುಂ.ವೀ. ಹೀಗೆ ಎಲ್ಲರನ್ನು, ಎಲ್ಲವನ್ನು ಟೀಕಿಸುತ್ತಲೇ ಬಂದವರು. ತಮ್ಮನ್ನು ಟೀಕಿಸಿದಾಗ ತಕ್ಷಣ ಪ್ರತಿಕ್ರಿಯಿಸುವವರು. ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಹುದ್ದೆ, ನಂತರ ಚುನಾವಣೆಯಲ್ಲಿ ಗೆದ್ದು ಕ.ಸಾ.ಪ. ಅಧ್ಯಕ್ಷರಾಗಿ ಆಯ್ಕೆಯಾಗಿ ಮತ್ತೊಂದು ಬಾರಿ ಸೋತವರು.

ಗೊರೂರು ಶಿವೇಶ್, ಹಾಸನ.
ಮೊ : 9480798674

### ಚರ್ಚೆ ಮುಂದುವರಿದಿದೆ

ಬಂಡಾಯವನ್ನೇ ಉಸಿರಾಗಿಸಿಕೊಂಡ ಚಂಪಾ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಲು ನಿಂತಾಗ ಅಪರಾಹ್ನ 2.15. ಬಹುತೇಕರು ಊಟಕ್ಕೆಂದು ಹೊರಟು ಸಭಾಂಗಣ ಅರ್ಧಕ್ಕೂ ಮಿಗಿಲಾಗಿ ಖಾಲಿಯಾಗಿತ್ತು. ಮೂವತ್ತರಿಂದ ನಲವತ್ತು ನಿಮಿಷ ಮಾತ್ರ ಮಾತನಾಡುತ್ತೇನೆ ಎಂದು ನಿಂತವರು ಸುದೀರ್ಘ ಒಂದೂವರೆ ತಾಸು ತ್ರಾಸವಿಲ್ಲದೆ ಮಾತನಾಡಿದರು. ಮುದ್ರಿತ ಪುಸ್ತಕದಲ್ಲಿ 40 ಪುಟಗಳಷ್ಟಿದ್ದ ಮಾತುಗಳವು. ಕನ್ನಡದ ನುಡಿ ಬೆಳವಣಿಗೆಗೆ ಬೇಕಾದ ದೃಷ್ಟಿಕೋನವಿಲ್ಲದ ಭಾಷಣ ನೀರಸವೆನಿಸುತ್ತಿದ್ದಂತೆ ಭಾಷಣವನ್ನು ತಮ್ಮ ಎಂದಿನ ವೈಖರಿಗೆ ತಿರುಗಿಸುವುದರ ಮೂಲಕ ವಿವಾದದ ಕಿಡಿಯನ್ನು ಹೊತ್ತಿಸಿದರು. ಇದರ ಬಗ್ಗೆ ಈಗಾಗಲೇ ಎಲ್ಲೆಡೆಯಲ್ಲೂ ಸಾಕಷ್ಟು ಪರ-ವಿರೋಧ ಚರ್ಚೆಯಾಗಿದೆ. ಮಳೆ ನಿಂತರೂ ನಿಲ್ಲದ ಮರದ ಹನಿಯಂತೆ ಸಮ್ಮೇಳನ ಮುಗಿದರೂ ಚರ್ಚೆ ಮುಂದುವರಿದಿದೆ.

### ಕವಿಗಳ ಸಂಖ್ಯೆಗೆ ಸಮ

ಊಟ, ವಸತಿ ಸಮ್ಮೇಳನದ ಯಶಸ್ಸಿನ ಮಾನದಂಡ ಎಂದು ಭಾವಿಸುವುದಾದರೆ, ಮೈಸೂರು ಸಮ್ಮೇಳನ ಯಶಸ್ವಿ ಸಮ್ಮೇಳನವೆಂದೇ ಹೇಳಬಹುದು. ಜಿಲ್ಲಾಡಳಿತವು ಸಂಘ ಸಂಸ್ಥೆ, ಸರ್ಕಾರಿ ನೌಕರರ ಸಹಾಯದಿಂದ ಇವುಗಳನ್ನು ಯಶಸ್ವಿಯಾಗಿ ಸಂಘಟಿಸಿತು. ಉದ್ಘಾಟನಾ ಸಮಾರಂಭ ಹೊರತುಪಡಿಸಿದರೆ ಉಳಿದಂತೆ ಗೋಷ್ಠಿಯಲ್ಲಿ ಸಾರ್ವಜನಿಕರದ್ದು ನೀರಸ ಪ್ರತಿಕ್ರಿಯೆ. ಈ ಮೊದಲು ಒಂದಿದ್ದ ಕವಿಗೋಷ್ಠಿ ನಂತರ ಕವಿಗೋಷ್ಠಿ, ಹನಿಗವನ ಗೋಷ್ಠಿ ಎಂದು ಎರಡಾಗಿ ನಂತರ ಪ್ರಧಾನ ವೇದಿಕೆ ಮತ್ತು ಸಮಾನಾಂತರ ವೇದಿಕೆಯೆರಡರಲ್ಲೂ ಕವಿಗೋಷ್ಠಿ ಆಯೋಜಿಸುವ ಪರಿಪಾಠ ಶುರುವಾಯಿತು. ಈ ಬಾರಿ ಕವಿಗಳನ್ನು ಸಂತೈಸಲೆಂದೇ ಮೂರನೇ ವೇದಿಕೆಯನ್ನು ಕಲ್ಪಿಸಿ ಅವಕಾಶಗಳನ್ನು ಕಲ್ಪಿಸಲಾಯಿತು. ಆ ವೇದಿಕೆಯಲ್ಲಿ ಸ್ಥಳವಿಲ್ಲವೆಂದು ಎರಡು ಹಂತದಲ್ಲಿ ವೇದಿಕೆಯೇರಲು ಅನುವು ಮಾಡಲಾಯಿತು. ಇದರಿಂದಾಗಿ ಪತ್ರಿಕೆಯೊಂದು ವರದಿ ಮಾಡಿದಂತೆ ಕೆಳಗಿದ್ದ ಪ್ರೇಕ್ಷಕರ ಸಂಖ್ಯೆ 47. ಮೇಲಿದ್ದ ಕವಿಗಳ ಸಂಖ್ಯೆಗೆ ಸಮನಾಗಿತ್ತು.

### ಮನರಂಜನೆಗೆ ಬೆನ್ನು

ಗೋಷ್ಠಿಗಳಿಗೆ ಜನರ ಈ ರೀತಿಯ ನೀರಸ ಪ್ರತಿಕ್ರಿಯೆ ಕಾರಣವೇನೆಂದು ನೋಡಿದರೆ ನಗರದಲ್ಲಿ ವಾಸಿಸುವಂತಹ ಜನರಿಗೆ ಮನರಂಜನೆಯ ಮಹಾಪೂರವೇ ಹರಿದು ಬರುತ್ತಿದೆ. ನೂರೆಂಟು ಚಾನಲ್‌ಗಳು ತಮ್ಮ ಕಾರ್ಯಕ್ರಮದ ಧಾರಾವಾಹಿಗಳ ಪ್ರಚಾರಕ್ಕಾಗಿ ನಡೆಸುವ ಕಾರ್ಯಕ್ರಮಗಳು, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳು ಅದ್ದೂರಿಯಾದ ಕಾರ್ಯಕ್ರಮವನ್ನು ಆಯೋಜಿಸಿ ಭರಪೂರ ಮನರಂಜನೆ



ನೀಡುತ್ತಿವೆ. ಹೀಗಾಗಿ ಮನರಂಜನೆ ಬಯಸಿ ಬರುವವರ ಸಂಖ್ಯೆ ಕಡಿಮೆ. ಪ್ರವಾಸಕ್ಕಾಗಿ ವಾರಂತ್ಯವನ್ನೇ ಕಾಯುತ್ತಿರುವವರಿಗೆ ಸಮ್ಮೇಳನಗಳು ವರದಾನವಾಗುತ್ತಿವೆ. ಒ.ಒ.ಡಿ. ಸೌಲಭ್ಯದ ಜೊತೆಗೆ ಊಟ ವಸತಿಯ ಆಕರ್ಷಣೆ ಅವರನ್ನು ಸೆಳೆಯುತ್ತಿದೆ. ಉದ್ಘಾಟನಾ ಸಮಾರಂಭ ಮುಗಿದೊಡನೆ ಮಾಯವಾಗುವ ಇವರು ಪ್ರವಾಸ ಮುಗಿಸಿ ಮನೆಗೆ ತೆರಳುತ್ತಾರೆ. ಅಳಿದುಳಿದವರು ವಿವಿಧ ಪರೀಕ್ಷೆಗಳಿಗೆ ತಯಾರಾಗುವವರಾಗಿದ್ದು, ಪುಸ್ತಕ ದಂಗಡಿಗಳಿಗೆ ಹೊರಡುತ್ತಾರೆ.

### ಹೆಚ್ಚಿದ ಸಮ್ಮೇಳನ

ಇನ್ನು ಸಾಹಿತ್ಯ ಸಮ್ಮೇಳನಗಳಿಗೆ ಸರ್ಕಾರ ಅನುದಾನ ನೀಡುವಿಕೆ ಆರಂಭವಾದ ನಂತರ ಸಮ್ಮೇಳನಗಳ ಸಂಖ್ಯೆ ಹೆಚ್ಚಿದೆ. ಎರಡು ಮೂರು ವರ್ಷಗಳಿಗೊಮ್ಮೆ ಸಂಘಟಕರು, ಸಾರ್ವಜನಿಕರು, ಸಂಘ ಸಂಸ್ಥೆಗಳ ದೇಣಿಗೆಯಿಂದ ನಡೆಯುತ್ತಿದ್ದ ಸಮ್ಮೇಳನಗಳು ಈಗ ಪ್ರತಿ ವರ್ಷ ನಡೆಯುತ್ತಿವೆ. ಹೋಬಳಿ,

> **ಸಮ್ಮೇಳನದ ಲೆಕ್ಕದಲ್ಲಿ ಊಟ-ವಸತಿ ಪಡೆದು ಉದ್ಘಾಟನಾ ಕಾರ್ಯಕ್ರಮಕ್ಕೆ ಹಾಜರಾಗಿ ಒಒಡಿ ಪಡೆದು ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಮರಳಿದರೆ ಅಲ್ಲಿಗೆ ಸಮ್ಮೇಳನ ಮುಗಿಯಿತು ಎನ್ನುವ ಸಂದರ್ಭದಲ್ಲಿ, ಯುವಜನರಲ್ಲಿ ಸಾಹಿತ್ಯಾಭಿರುಚಿ ಮೂಡಿಸುವ, ಅವರನ್ನು ಪ್ರೇರೇಪಿಸುವ, ತನ್ಮೂಲಕ ಕನ್ನಡ ಅಭಿಮಾನ ಮೂಡಿಸುವ ಸಾಹಿತ್ಯ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಬೇಕಾಗಿದೆ.**

ತಾಲ್ಲೂಕು, ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳು ನಿರಂತರವಾಗಿ ನಡೆಯುತ್ತಿದ್ದು, ಇಲ್ಲಿ ಆಯೋಜಿಸಲಾಗುವ ಗೋಷ್ಠಿಗಳು ಬಹುತೇಕ ಒಂದೇ ವಿಷಯವನ್ನು ಹೊಂದಿರುತ್ತವೆ. ಕವಿಗೋಷ್ಠಿ, ಮಹಿಳಾ, ಕೃಷಿಗೆ ಸಂಬಂಧಿಸಿದ ಗೋಷ್ಠಿಗಳು ಒಂದು ದಿನದ ಸಾಹಿತ್ಯ ಸಮ್ಮೇಳನದ ಅಜೆಂಡಾವಾದರೆ, ಎರಡು ಮೂರು ದಿನದ ಸಮ್ಮೇಳನಗಳಿಗೆ ಶಿಕ್ಷಣ, ಕನ್ನಡ ಮಾಧ್ಯಮ, ಮಾಧ್ಯಮ ಕ್ಷೇತ್ರ, ಮಾಹಿತಿ ಮತ್ತು ತಂತ್ರಜ್ಞಾನದ ಗೋಷ್ಠಿಗಳು ಸಾಮಾನ್ಯವಾಗಿ ಇರುತ್ತವೆ. ಇಲ್ಲಿ ಮಾತನಾಡುವ ವಿದ್ವಾಂಸರು ಹೇಳಿದ್ದನ್ನೇ ಹೇಳುವುದರಿಂದ ಚರ್ವಿತ ಚರ್ವಣದ ಭಾಷಣಗಳಿಗೆ ಹೋಗುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಉದಾಹರಣೆಗೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮಾತನಾಡುವವರೆಲ್ಲರೂ ಮಾತೃಭಾಷೆ ಶಿಕ್ಷಣದ ಮಾಧ್ಯಮವಾಗಬೇಕು ಎಂದು ಹೇಳಿ, ನಂತರ ಕನ್ನಡದ ಅನ್ನದ ಭಾಷೆಯಾಗಬೇಕು ಎಂದು ಹೇಳುತ್ತಾರೆ. ಸಮಸ್ಯೆಗಳನ್ನು ಎಳೆ ಎಳೆಯಾಗಿ ಬಿಚ್ಚಿಡುವ ಅವರು, ಅದಕ್ಕೆ ಪರಿಹಾರ ಸೂಚಿಸುತ್ತಾರೆ ಎಂದು ನಿರೀಕ್ಷಿಸಿದರೆ ಅದು ಶೂನ್ಯ.

### ಬರೀ ಕನ್ನಡ ಸಮ್ಮೇಳನ

ಪ್ರೇಕ್ಷಕರಿಲ್ಲವೆಂದು ಆಯೋಜಕರು ತಡವಾಗಿ ಕಾರ್ಯಕ್ರಮ ಆಯೋಜಿಸಿದರೆ ತಡವಾಗಿ ಪ್ರಾರಂಭವಾಗುತ್ತದೆ ಎಂದು ಪ್ರೇಕ್ಷಕರು ನಿಧಾನವಾಗಿ ಬರುತ್ತಾರೆ. ಇದು ಮುಂದಿನ ಎಲ್ಲಾ ಕಾರ್ಯಕ್ರಮಗಳ ಮೇಲೆ ಪ್ರಭಾವ ಬೀರಿ ವಿಷಯ ಮಂಡಕರು ವಿಷಯ ಪ್ರಸ್ತಾಪಕ್ಕೆ ಮುನ್ನವೇ ಚೀಟಿ ನೀಡುವ ಸ್ಥಿತಿ ಬಂದೊದಗುತ್ತದೆ.

ಸಾಹಿತ್ಯ ಸಮ್ಮೇಳನಗಳ ಸಾಹಿತ್ಯವನ್ನು ಬದಿಗಿರಿಸಿ ಬರಿ ಕನ್ನಡ ಸಮ್ಮೇಳನಗಳಾಗುತ್ತಿವೆ. ಹಿಂದೆ ಸಾಹಿತ್ಯ ಓದುಗರ ಸಂಖ್ಯೆ ಅಪಾರವಾಗಿದ್ದಾಗ ಅಖಿಲ ಭಾರತ ಕನ್ನಡ ಸಮ್ಮೇಳನಗಳಿಗೆ ಸೇರುತ್ತಿದ್ದ ಆಸಕ್ತರ ಸಂಖ್ಯೆ ಕೆಲವು ಸಾವಿರ. ಸಾಹಿತಿಗಳು ಹಿಂದಿನ ದಿನವೇ ಹಾಸಿಗೆ, ಹೊದಿಕೆಗಳನ್ನು ಟ್ರೈನಿನಲ್ಲಿ ಹೊತ್ತು, ಅವರಿಗೆ ನಿಗದಿಪಡಿಸಿದ ಶಾಲಾ ಕಾಲೇಜಿನಲ್ಲಿ ತಂಗಿ ಸಾಹಿತ್ಯಾಸಕ್ತರನ್ನು, ಅಭಿಮಾನಿಗಳನ್ನು ಭೇಟಿಯಾಗಿ ವಿದ್ವತ್‌ಪೂರ್ಣ ಭಾಷಣಗಳ ಮೂಲಕ ಹಳೆ ಕಾವ್ಯಗಳ ಮರು ಚಿಂತನೆ, ಸಾಹಿತ್ಯಿಕ ಒಲವು-ನಿಲುವುಗಳ ಚರ್ಚೆ ಮಾಡುತ್ತಿದ್ದರು. ಈಗ ಚರ್ಚೆ ಮಾಯವಾಗಿ ಅಬ್ಬರದ, ವಿವಾದಕ್ಕೆಡೆ ಮಾಡುವ ಮಾತುಗಳನ್ನಾಡುವ, ತನ್ಮೂಲಕ ಪ್ರಚಾರ ಪಡೆಯಲೆತ್ನಿಸುವವರ ಸಂಖ್ಯೆ ಹೆಚ್ಚುತ್ತಿದೆ.

### ಕವನ ಸೃಷ್ಟಿಸಿ ವಾಚನ

ಕಾವ್ಯವೆಂಬುದು ಅನುಭವದ ಮೂಸೆಯಿಂದ ಬರದೆ ಹಿಂದಿನ ದಿನ ನೋಡಿದ, ಕೇಳಿದ, ಇಲ್ಲವೆ ಆ ಕ್ಷಣ ನಡೆದ ಘಟನೆಯೊಂದಕ್ಕೆ ಅಲ್ಲಿಯೇ ಕವನ ಸೃಷ್ಟಿಸಿ, ವಾಚಿಸುವವರಿದ್ದಾರೆ. ಚಂಪಾರವರ ಕವಿತೆ ಎಂದರೆ ಕವನದ ಮೊದಲ ಸಾಲುಗಳು ಹೀಗಿದೆ. 'ಕವಿತೆ ಅಂದರೆ ಒಂದರ್ಥದಲ್ಲಿ ಬರೀ ಮಾತು, ಶಬ್ದ ಬರೋಬ್ಬರಿ' ಇಷ್ಟನ್ನೇ ಓದಿ ಅನುಷ್ಠಾನಕ್ಕೆ ತರುವ ಕವಿಗಳು ಹೆಚ್ಚಾಗಿ, ಈ ಬಾರಿ ಮೂರು ವೇದಿಕೆಯಲ್ಲಿ ನೂರಿಪ್ಪತ್ತಕ್ಕೂ ಹೆಚ್ಚಿಗೆ ಕವಿಗಳು ಕವಿತೆ ವಾಚಿಸಿದ್ದಾರೆ.

### ಚಂದನವನವಾಗಲಿ ಸಮ್ಮೇಳನ

ಸಮ್ಮೇಳನದ ಲೆಕ್ಕದಲ್ಲಿ ಊಟ-ವಸತಿ ಪಡೆದು ಉದ್ಘಾಟನಾ ಕಾರ್ಯಕ್ರಮಕ್ಕೆ ಹಾಜರಾಗಿ ಒಒಡಿ ಪಡೆದು ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಮರಳಿದರೆ ಅಲ್ಲಿಗೆ ಸಮ್ಮೇಳನ ಮುಗಿಯಿತು ಎನ್ನುವ ಸಂದರ್ಭದಲ್ಲಿ, ಯುವಜನರಲ್ಲಿ ಸಾಹಿತ್ಯಾಭಿರುಚಿ ಮೂಡಿಸುವ, ಅವರನ್ನು ಪ್ರೇರೇಪಿಸುವ, ತನ್ಮೂಲಕ ಕನ್ನಡ ಅಭಿಮಾನ ಮೂಡಿಸುವ ಸಾಹಿತ್ಯ ಚಟುವಟಿಕೆಗಳಿಗೆ ಹೆಚ್ಚು ಒತ್ತು ನೀಡಬೇಕಾಗಿದೆ. ಮೂಡಬಿದ್ರೆಯ ಆಳ್ವಾಸ್‌ರವರ ನುಡಿಸಿರಿ, ಧಾರವಾಡದ ಸಾಹಿತ್ಯ ಸಂಭ್ರಮದ ಉತ್ತಮ ಕಾರ್ಯಕ್ರಮಗಳನ್ನು ಇಲ್ಲಿ ಅಳವಡಿಸಿಕೊಳ್ಳಬೇಕಾಗಿದೆ. ನುಡಿಸಿರಿಯಲ್ಲಿ ಶತಮಾನದ ಸಾಹಿತಿಗಳು ಅಂದರೆ ಅಡಿಗರು, ಎಂ.ಕೆ.ಇಂದಿರಾರ ಕೃತಿಗಳ ಕುರಿತು ಗೋಷ್ಠಿ, ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ ಲೇಖಕರ ಕೃತಿಗಳ ಕಥಾವಾಚನ, ಗೋಷ್ಠಿಯ ನಂತರದ ಚರ್ಚೆ ಇದಕ್ಕೆ ಒಂದೆರಡು ಉದಾಹರಣೆ. ಸಾಹಿತ್ಯ ಸಮ್ಮೇಳನಗಳು ಊಟ ವಸತಿಗಳ ತಂಗುದಾಣಗಳಾಗದೆ ಸಾಹಿತ್ಯದ ಪರಿಮಳ ಹರಡುವ ಚಂದನವನವಾಗಬೇಕಾಗಿದೆ.

# ಕಿರಣಗಳ ಪ್ರವೇಶದಿಂದ ಭ್ರೂಣ ವ್ಯತ್ಯಾಸ

ಭೀಮಸೇನರಾವ್ ಎಂಬುವವರು ಸುಬ್ಬರಾಮಯ್ಯ ಎಂಬುವವರನ್ನು ಶೃಂಗೇರಿಗೆ ಕರೆದೊಯ್ದರು. ಅಲ್ಲಿ ಗುರುಗಳ ದರ್ಶನದ ವೇಳೆಯಲ್ಲಿ ಗುರುಗಳು ಭೀಮಸೇನರಾಯರನ್ನು ಕುರಿತು 'ನಿಮ್ಮ ವಿವಾಹ ನಿಶ್ಚಯವಾಯಿತೆ?' ಎಂದರು. ವಿವರಣೆ ಪಡೆದ ನಂತರ 'ಆಗುತ್ತದೆ, ಚಿಂತೆ ಬೇಡ' ಎಂದು ಆಶೀರ್ವದಿಸಿದರು. ಬಳಿಕ ಎಲ್ಲರೂ ಹೊರಟಾಗ ಸುಬ್ಬರಾಮಯ್ಯನವರನ್ನು ಕರೆದು ಕುಳಿತುಕೊಳ್ಳುವಂತೆ ಗುರುಗಳು ಸೂಚಿಸಿದರಲ್ಲದೇ. 'ನಾವು ನಿಮ್ಮ ಸ್ನೇಹಿತರಿಗೆ ವಿವಾಹವಾಗುವಂತೆ ಹೇಳಿದೆವು. ನಿಮಗೆ ಮದುವೆ ಆಗಬೇಡಿ ಎನ್ನುತ್ತೇವೆ' ಎಂದರು ಹಾಗೂ ಮುಂದುವರೆದು 'ಸುಬ್ಬರಾಮಯ್ಯನವರೇ ನಿಮ್ಮ ವಿಜ್ಞಾನದಲ್ಲಿ 'ಎಕ್ಸ್‌ರೇ' ಎಂಬ ಪದವಿದೆಯಲ್ಲ ಹಾಗೆಂದರೇನು? ಅದರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ನಮಗಿದೆ' ಎಂದರು. ಮತ್ತೆ ಮಾತನ್ನು ಮುಂದುವರಿಸಿ, 'ನೀವು ಹೇಳುವ ಎಕ್ಸ್‌ರೇ ಕಿರಣವನ್ನು ಭ್ರೂಣದ ಮೇಲೆ ಬಿಟ್ಟಾಗ ಭ್ರೂಣ ಸ್ವಲ್ಪ ವಿಕಾರ ಹೊಂದಿ ನಮಗೆ ಭ್ರೂಣದ ಬಗೆಗಿನ ಮಾಹಿತಿಯನ್ನು ಕೊಡುತ್ತದೆಂದು ನಿಮ್ಮ ವಿಜ್ಞಾನ ಹೇಳುತ್ತದೆಯಲ್ಲವೇ? ಎಂದರು. ಸುಬ್ಬರಾಮಯ್ಯನರು ಹೌದೆಂದರು. 'ಅದು ಸರಿ, ಹಾಗಾದರೆ ಎಕ್ಸ್‌ರೇ ಕಿರಣಗಳನ್ನು ಬಿಟ್ಟ ಮೇಲೆ ವ್ಯತ್ಯಾಸ ಹೊಂದಿದ ಭ್ರೂಣ ತಮಗೆ ಯಾವ ರೀತಿಯ ಮಾಹಿತಿಗಳನ್ನು ಕೊಡಲು ಸಾಧ್ಯ? ಏಕೆಂದರೆ ಆ ಎಕ್ಸ್‌ರೇ ಕಿರಣಗಳು ವ್ಯತ್ಯಾಸ ಹೊಂದಿದ ಭ್ರೂಣದ ವಿವರಗಳನ್ನು ತೋರಿಸಲು ಸಾಧ್ಯವೇ ಹೊರತು ಆ ಭ್ರೂಣದ ನಿಜವಾದ ಸ್ಥಿತಿಯನ್ನಲ್ಲ. ಏಕೆಂದರೆ ಕಿರಣಗಳ ಪ್ರವೇಶವಾದ ಕೂಡಲೇ ಭ್ರೂಣವು ವ್ಯತ್ಯಾಸವಾಗಿಯೇ ಬಿಡುತ್ತದಲ್ಲಾ, ಹಾಗಿದ್ದಾಗ ಅದರಿಂದ ಸಿಗುವ ಮಾಹಿತಿ ಸರಿಯಾಗಿರಲು ಸಾಧ್ಯವೇ? ಎಂದರು. ಏಕೆಂದರೆ ಆಧುನಿಕ ವಿಜ್ಞಾನದ ಪ್ರಕಾರ Interaction of the observer/with observer ಎಂಬ ಒಂದು ನಿಯಮವಿದೆ. ಆದರೆ ನಮ್ಮ ಸಂಪ್ರದಾಯದ ಪ್ರಕಾರ ಹೇಳುವುದಾದರೆ ಪ್ರಮಾಣದಿಂದ ಪ್ರಮೇಯವನ್ನು ನಿರ್ಣಯಿಸಬೇಕು. ವಿಜ್ಞಾನದ ರೀತಿಯನ್ನು ಆಶ್ರಯಿಸಿದರೆ ಪ್ರಮಾಣವನ್ನು ಪ್ರಮೇಯದ ಮೇಲೆ ಪ್ರಯೋಗಿಸಿ ಪ್ರಮೇಯವನ್ನೇ ವ್ಯತ್ಯಾಸವನ್ನಾಗಿ ಮಾಡಿ ತೋರಿಸುತ್ತದೆ ಎಂದಾದಲ್ಲಿ ಅದರಿಂದ ಬರುವ ತಿಳಿವಳಿಕೆ ಎಷ್ಟು ಸಮರ್ಪಕ? ಎಂಬುದೇ ಗುರುಗಳ ಪ್ರಶ್ನೆಯಾಗಿತ್ತು. ಹೀಗೆ ವಿಜ್ಞಾನದಲ್ಲೂ ಜ್ಞಾನವನ್ನು ಹೊಂದಿದ್ದರು.



ಶ್ರೀ ಶಂಕರಭಾರತೀ ಸ್ವಾಮೀಜಿ

# ಮಕ್ಕಳ ಪ್ರತಿಭಾ ವಿಕಸನ-ಒಂದು ನೋಟ

ದೇಶದ ಭವಿಷ್ಯವನ್ನು ಮಕ್ಕಳ ಕಣ್ಣಾಲಿಗಳಲ್ಲಿ ಕಾಣಬೇಕು ಎಂಬ ಮಾತು ಎಷ್ಟು ಅರ್ಥಗರ್ಭಿತವಾದದ್ದು ಎನಿಸುತ್ತದೆ. ಕಾರಣ ಇಂದು ಜನಿಸಿ ಬೆಳೆಯುತ್ತಿರುವ ಮಗು ದೊಡ್ಡವನಾಗಿ ವಿದ್ಯೆ, ಬುದ್ಧಿ, ಶಕ್ತಿಗಳನ್ನು ಗಳಿಸಿಕೊಂಡು ಮುಂದೆ ಲೋಕದ ಆಗು ಹೋಗುಗಳನ್ನು ತಿಳಿದುಕೊಂಡು ಸತ್ಪ್ರಜೆಯಾಗಬಲ್ಲದು, ಆಡಳಿತ ಚುಕ್ಕಾಣಿ ಹಿಡಿಯಬಲ್ಲದು. ಅಂತಹ ಉತ್ತಮ ವ್ಯಕ್ತಿತ್ವವನ್ನು ಅವನಲ್ಲಿ ರೂಪುಗೊಳ್ಳುವ ಹಾಗೂ ಅವರ ಕನಸುಗಳನ್ನು ನನಸು ಮಾಡುವ ನಿಟ್ಟಿನಲ್ಲಿ ನಾವು ಚಿಂತಿಸೋಣ.

### ಪ್ರತಿಭೆ ಪೋಷಿಸಬೇಕು

ಭೂಮಿಯ ಒಳಗೆ ಎಲ್ಲೋ ಕಚ್ಚಾ ರೂಪದಲ್ಲಿರುವ ವಜ್ರವನ್ನು ಮೇಲಕ್ಕೆ ತಂದು ಸಾಣೆ ಹಿಡಿದು ಚಿನ್ನದ ಆಭರಣದೊಂದಿಗೆ ಧರಿಸಿದಾಗ ಅದಕ್ಕೊಂದು ಬೆಲೆ. ಆಗ ಜನ ಅದನ್ನು ನಿಬ್ಬೆರಗಾಗಿ ನೋಡಿ ತಮ್ಮದಾಗಿಸಿಕೊಳ್ಳಲು ಬಯಸುತ್ತಾರೆ. ಈ ವಜ್ರದಂತೆ ಮಕ್ಕಳ ಪ್ರತಿಭೆ ಕೂಡ. ಅದು ಯಾವ ಮಕ್ಕಳಲ್ಲಿ ಯಾವ ರೂಪದಲ್ಲಿ ಹೇಗೆ ಸುಪ್ತವಾಗಿದೆಯೋ ತಕ್ಷಣ ತಿಳಿಯದು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಕ್ಕಳ ಸುಪ್ತ ಪ್ರತಿಭೆಯನ್ನು ಪಾಲಕರು, ಶಿಕ್ಷಕರು, ಸಮಾಜವೂ ಆದ ನಾವುಗಳು ಪತ್ತೆ ಹಚ್ಚಿ, ನೀರು, ಗೊಬ್ಬರ ಹಾಕಿ ಪೋಷಿಸಬೇಕು. ಸಾಣೆ ಹಿಡಿಯಬೇಕು. ಸೂಕ್ತ ತರಬೇತಿ, ಶಿಕ್ಷಣ ನೀಡಿ ಅದು ಪಕ್ವವಾಗುವಂತೆ ಮಾಡಬೇಕು. ಆನಂತರ ಸೂಕ್ತವಾದ ಸಮಯಾವಕಾಶ ನೋಡಿಕೊಂಡು ವೇದಿಕೆಯಲ್ಲಿ ಪ್ರದರ್ಶನವಾಗುವಂತೆ ಮಾಡಬೇಕು. ಆ ಪ್ರತಿಭೆ ಆಗ ಪ್ರಕಾಶಿಸುತ್ತದೆ. ಮನಸ್ಸಿಗೆ ಮುದ ನೀಡುತ್ತಾ ನೋಡುಗರ ಕಣ್ಣನ್ನು ಕೋರೈಸುತ್ತದೆ. ಪ್ರತಿಭಾಶಾಲಿಗೆ ಸ್ಥಾನಮಾನಗಳು ದೊರೆಯುವಂತಾಗುತ್ತದೆ.

ಸುಕನ್ಯಮುಕುಂದ, ಹಾಸನ

### ಕಲಿಸುವ ಕಲಿಕೆ

ನಮ್ಮಲ್ಲಿ ಮಕ್ಕಳಿಗೆ ಒಂದಿಷ್ಟು ಅಡುಗೆ ಮಾಡಿ ಹಾಕಿ ಒಳ್ಳೆಯ ಶಾಲೆಗೆ ಕಳಿಸಿದರಾಯಿತೆನ್ನುವ ಮನೋಭಾವದವರೇನೂ ಕಡಿಮೆಯಿಲ್ಲ. ಮಕ್ಕಳು ನಮ್ಮ ಮಾತನ್ನು ಕೇಳುವುದಿಲ್ಲ, ಏನು ಮಾಡುವುದು ಎನ್ನುವವರೂ ಇದ್ದಾರೆ. ಅತಿ ಪ್ರೀತಿಯಿಂದ ಕೇಳಿದ್ದನ್ನೆಲ್ಲಾ ಕೊಡಿಸಿ ಅವರ ಹಿನ್ನಡೆಗೆ ಕಾರಣರಾಗುವವರೂ ಇರುತ್ತಾರೆ.

ನಾವು ಮಕ್ಕಳೊಂದಿಗೆ ನಡೆದುಕೊಳ್ಳುವ ರೀತಿ, ಕಲಿಸುವ ಪಾಠ, ಆಡುವ ಆಟ, ಇಡುವ ಹತೋಟಿ, ಅವರ ಒಡನಾಟ, ಸ್ನೇಹ ಇವೆಲ್ಲ ಅವರ ಬದುಕಿನ ದಿಕ್ಕನ್ನು ತೋರಿಸುವ ದಾರಿದೀಪಗಳು. ಮಕ್ಕಳೊಂದಿಗೆ ಮಕ್ಕಳಾಗಿ ಅವರಿಗಿರುವ ಆಸಕ್ತಿಯ ವಿಷಯವನ್ನು ಪ್ರೋತ್ಸಾಹಿಸಿ ಕಲಿಸುವ ಕಲಿಕೆಯಿಂದ ಅವರ ಬದುಕು ಹಸನಾಗುತ್ತದೆ.



> **ನಮ್ಮಲ್ಲಿ ಮಕ್ಕಳಿಗೆ ಒಂದಿಷ್ಟು ಅಡುಗೆ ಮಾಡಿ ಹಾಕಿ ಒಳ್ಳೆಯ ಶಾಲೆಗೆ ಕಳಿಸಿದರಾಯಿತೆನ್ನುವ ಮನೋಭಾವದವರೇನೂ ಕಡಿಮೆಯಿಲ್ಲ. ಮಕ್ಕಳು ನಮ್ಮ ಮಾತನ್ನು ಕೇಳುವುದಿಲ್ಲ, ಏನು ಮಾಡುವುದು ಎನ್ನುವವರೂ ಇದ್ದಾರೆ. ಅತಿ ಪ್ರೀತಿಯಿಂದ ಕೇಳಿದ್ದನ್ನೆಲ್ಲಾ ಕೊಡಿಸಿ ಅವರ ಹಿನ್ನಡೆಗೆ ಕಾರಣರಾಗುವವರೂ ಇರುತ್ತಾರೆ.**

### ನಾವೂ ಕಾರಣರಾಗುತ್ತೇವೆ

ಮಕ್ಕಳ ಹಿಂದುಳಿಯುವಿಕೆಗೆ ಕೆಲವೊಮ್ಮೆ ನಾವೂ ಕಾರಣರಾಗುತ್ತೇವೆ. ಅವರ ಸ್ವಂತಿಕೆಗೆ ಅವಕಾಶ ನೀಡದೆ ಅತಿಯಾದ ನಿರೀಕ್ಷೆ ಇಟ್ಟುಕೊಂಡು ನಮ್ಮ ಕೋಪ-ತಾಪ ಗಳನ್ನು ಅವರ ಮೇಲೆ ಪ್ರಯೋಗಿಸುತ್ತೇವೆ. ಆದರೆ ಮಕ್ಕಳು ನಮ್ಮ ನಗುಮುಖವನ್ನು ಇಷ್ಟಪಡುತ್ತವೆ. ನಾವು ಹೆದರಿಸಲು ನೋಡಿದರೆ ದೂರ ಸರಿಯುತ್ತದೆ. ಹಾಗಾಗಿ ತಮ್ಮ ದುಃಖ, ಸಂತೋಷಗಳನ್ನು ನಮ್ಮೊಂದಿಗೆ ಮುಕ್ತವಾಗಿ ಹಂಚಿಕೊಳ್ಳುವ ಪ್ರೀತಿಯನ್ನು ನಾವು ತೋರುವವರಾಗಬೇಕಿದೆ.

ಮಕ್ಕಳ ಮನಸ್ಸು ತೀರಾ ಸೂಕ್ಷ್ಮವಾಗಿದ್ದು, ಅವರಿಗೆ ಭಯ, ಕೀಳರಿಮೆ ಕಾಡದಂತೆ ಎಚ್ಚರಿಕೆ ವಹಿಸಬೇಕಾಗುತ್ತದೆ. ಕಥೆ ದೃಷ್ಟಾಂತಗಳ ಹೇಳುವ, ಸಂಸ್ಕೃತಿಯ ಮೂಲಕ ಮಾನವೀಯ ಮೌಲ್ಯಗಳ ಅರಿವು ಮೂಡಿಸುವ, ಬುದ್ಧಿಶಕ್ತಿಯನ್ನು ಹೆಚ್ಚಿಸುವ ಕುಟುಂಬದ ಹಾಗೂ ಸಮಾಜದೊಂದಿಗೆ ಮಧುರ ಬಾಂಧವ್ಯ ಬೆಳೆಸುವ ಪ್ರಯತ್ನ ಆಗಬೇಕಿದೆ.

### ದಿನಪತ್ರಿಕೆ ಓದಿಸಿ

ಮಕ್ಕಳಲ್ಲಿ ಅಡಗಿರುವ ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ, ನೃತ್ಯ, ಯೋಗಾಭ್ಯಾಸ, ಸಂಶೋಧನೆ ಮುಂತಾದವುಗಳಿಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಪುಸ್ತಕ, ದಿನಪತ್ರಿಕೆ ಓದುವ ಹವ್ಯಾಸಗಳನ್ನು ಬೆಳೆಸುವ, ಚಿಂತಿಸುವ ಹಾಗೂ ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮನೋಭಾವಗಳಲ್ಲಿ ಆಸಕ್ತಿ ಮೂಡಿಸಬೇಕಿದೆ.

ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವಲ್ಲಿ ಶಾಲಾ ಮಟ್ಟದಿಂದ ಹಿಡಿದು ರಾಷ್ಟ್ರ ಮಟ್ಟದವರೆಗೆ ಹಮ್ಮಿಕೊಳ್ಳುವ ಪ್ರತಿಭಾ ಕಾರಂಜಿ, ಪ್ರಬಂಧ ಹಾಗೂ ವಿಜ್ಞಾನ ವಸ್ತು ಪ್ರದರ್ಶನ, ಕಲಾ ಸ್ಪರ್ಧೆಗಳು ಮುಂತಾದ ಹತ್ತು ಹಲವು ಯೋಜನೆ ಸಹಕಾರಿಯಾಗಿವೆ.

### ಶ್ಲಾಘನೀಯ ಕಾರ್ಯ

ಸರಕಾರವಲ್ಲದೇ ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಹಲವು ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಮಕ್ಕಳ ಸೃಜನಾತ್ಮಕ ಚಟುವಟಿಕೆಗಳಿಗೆ ಇಂಬು ಕೊಡುತ್ತಿರುವ ಕರ್ನಾಟಕ ರಾಜ್ಯ ಹಾಗೂ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತಿನ ಪ್ರಯತ್ನ ಶ್ಲಾಘನೀಯ. ಮಕ್ಕಳ ಚಾವಡಿ, ಮನೆ-ಮನ ಕಾರ್ಯಕ್ರಮ, ಕಥೆ-ಕವನ ಸ್ಪರ್ಧೆಗಳನ್ನು ಏರ್ಪಡಿಸಿ ಮಕ್ಕಳಿಗೆ ಬಹುಮಾನ ನೀಡುವ ಮೂಲಕ ಪ್ರೋತ್ಸಾಹಿಸುವ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಚ.ನಾ.ಅಶೋಕ್‌ರವರ ಕಾರ್ಯ ಮೆಚ್ಚುವಂತಹದು.

### ಪ್ರತಿಭಾ ಶೋಧಕ್ಕೆ ಸಾಕ್ಷಿ

ಇದೇ ತಿಂಗಳ ಡಿಸೆಂಬರ್ 6 ಮತ್ತು 7ರಂದು ಚನ್ನರಾಯಪಟ್ಟಣದಲ್ಲಿ ನಡೆಯುತ್ತಿರುವ ಹಾಸನ ಜಿಲ್ಲಾ ಮಕ್ಕಳ ಸಾಹಿತ್ಯ ಸಮ್ಮೇಳನ ಒಂದು ಪ್ರತಿಭಾ ಶೋಧಕ್ಕೆ ಸಾಕ್ಷಿ. ಕನ್ನಡ ನಾಡು-ನುಡಿ ಸಾಹಿತ್ಯ ಬಿಂಬಿಸುವ ಈ ಸಾಹಿತ್ಯ ಜಾತ್ರೆಯಲ್ಲಿ ಮಕ್ಕಳೇ ಸಮ್ಮೇಳನಾಧ್ಯಕ್ಷರು, ಉಪಾಧ್ಯಕ್ಷರು, ವಿಚಾರಗೋಷ್ಠಿಗಳ ವೈಚಾರಿಕ ವಿಷಯ ಮಂಡನೆಯ ಭಾಷಣಕಾರರು, ಕವಿಗೋಷ್ಠಿಯ ಬಾಲ ಸಾಹಿತಿಗಳು, ಕಾರ್ಯಕ್ರಮದ ನಿರೂಪಕರು, ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಸಂಗೀತ, ನೃತ್ಯ ಕಲಾವಿದರು ಹೀಗೆ ಮಕ್ಕಳ ಪ್ರತಿಭೆಯ ಅನಾವರಣಕ್ಕೆ ಸಮ್ಮೇಳನ ಸೂಕ್ತ ವೇದಿಕೆಯಾಗಿದೆ.

# ಟೊಮೊಟೋಗಳ ಸೇವನೆ ಆರೋಗ್ಯಕರ ಜೀವನಕ್ಕೆ ನಾಂದಿ

ಟೊಮೊಟೋ ಸೇವನೆ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಿದ್ದರೂ ನಾವು ಅದರಲ್ಲಿರುವ ನ್ಯೂಟ್ರೀಷನ್ ಅಂಶಗಳ ಬಗ್ಗೆ ತಿಳಿದಿರುವುದು ಮಾತ್ರ ಅಲ್ಪವೇ. ಮೆಕ್ಸಿಕೋ ಮೂಲದ ಇದು ಸೋಲ್ಯಾನಮ್ ಲೈಕೋ ಪೆರ್ಸಿಕಮ್ ಎಂಬ ವೈಜ್ಞಾನಿಕ ಹೆಸರು ಹೊಂದಿದ್ದು, ಟೊಮೊಟೋ ತರಕಾರಿಯೂ ಹೌದು, ಹಣ್ಣೂ ಹೌದು. ಇಂದು ವೈವಿಧ್ಯಮಯವಾದ ಮತ್ತು ಸಿದ್ಧಪಡಿಸಿದ ಆಹಾರಗಳ ಸುಗಂಧ ಮತ್ತು ರುಚಿ ಹೆಚ್ಚಿಸಲು ಟೊಮೊಟೋಗಳು ಬಳಕೆಯಾಗುತ್ತಿವೆ. ಆದರೆ ದಿನನಿತ್ಯ ಟೊಮೊಟೋ ಸೇವನೆ ನಮ್ಮನ್ನು ಅನೇಕ ಅಪಾಯಕಾರಿ ಕಾಯಿಲೆಗಳಿಂದ ಬಚಾವು ಮಾಡಬಲ್ಲದು ಎಂಬುದು ಬಹಳಷ್ಟು ಮಂದಿಗೆ ತಿಳಿದಿಲ್ಲ. ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ಕೆನಡಾ ದೇಶಗಳಲ್ಲಿ ಕೈಗೊಳ್ಳಲಾದ ಹಲವಾರು ಸಂಶೋಧನೆಗಳಿಂದ ಟೊಮಾಟೋ ಸೇವನೆಯಿಂದ ದೈನಂದಿನ ಜೀವನದಲ್ಲಿ ತಲೆದೋರಬಹುದಾದ ಬಹಳಷ್ಟು ಉಪದ್ರವಕಾರಿ ರೋಗಗಳಿಂದ ಮುಕ್ತಿ ತಂದುಕೊಡುತ್ತದೆ ಎಂಬುದು ಪ್ರತಿಪಾದಿತವಾಗಿದೆ.

ಡಾ.ವಿದ್ಯಾ ಎಚ್.ಎನ್., ಹಾಸನ ಮೊ : 9448870802

### ಹೃದಯ ಕಾಯಿಲೆಗೆ ರಾಮಬಾಣ

ಹೃದಯ ಸಂಬಂಧಿ ಕಾಯಿಲೆಗಳ ಕುರಿತು ನಮ್ಮಲ್ಲಿ ಬಹಳಷ್ಟು ಗೊಂದಲಗಳಿವೆ. ಹೃದಯ ಸಂಬಂಧಿ ಕಾಯಿಲೆಗಳಿಂದ ನರಳುವವರು ಯಾವ ಆಹಾರ ಸೇವಿಸಬೇಕು, ಎಷ್ಟು ಸೇವಿಸಬೇಕು, ಯಾವಾಗ ಸೇವಿಸಬೇಕು ಎಂಬ ಗೊಂದಲದಲ್ಲಿ ಇರುತ್ತಾರೆ ಆದರೆ ಟೊಮೊಟೋ ಇಂತಹ ಕಾಯಿಲೆಗಳಿಂದ ನರಳುವವರಿಗೆ ರಾಮಬಾಣದಂತೆ. ಬ್ರಿಟಿಷ್ ಜರ್ನಲ್ ಆಫ್ ನ್ಯೂಟ್ರಿಷನ್ ಪ್ರಕಾರ ಕಾರ್ಡಿಯೋ ವ್ಯಾಸ್ಕುಲಾರ್ ಕಾಯಿಲೆಗಳ ವಿರುದ್ಧ ಹೋರಾಡಲು ಟೊಮಾಟೋ ಸೇವನೆ ಅತ್ಯಂತ ಉಪಕಾರಿ.

ವಿಟಮಿನ್ ಎ, ವಿಟಮಿನ್ ಸಿ, ವಿಟಮಿನ್ ಕೆ, ವಿಟಮಿನ್ ಬಿ1, ವಿಟಮಿನ್ ಬಿ3, ವಿಟಮಿನ್ ಬಿ5, ವಿಟಮಿನ್ ಬಿ6, ವಿಟಮಿನ್ ಬಿ7ಗಳಷ್ಟೇ ಅಲ್ಲದೆ ಇದರಲ್ಲಿ ಫೋಲೇಟ್, ಐರನ್, ಪೊಟ್ಯಾಶಿಯಮ್, ಮ್ಯಾಗ್ನಿಶಿಯಂ, ಕ್ರೋಮಿಯಂ, ಜಿಂಕ್, ಫಾಸ್ಪರಸ್ ಇತ್ಯಾದಿಗಳ ಗಣಿ ಈ ಟೊಮೊಟೋ

### ಅಜೀರ್ಣಕ್ಕೆ ಮದ್ದು

ಫೈಟೋ ನ್ಯೂಟ್ರಿಯೆಂಟ್‌ಗಳ ಸಮೃದ್ಧ ಆಗರ ಟೊಮೊಟೋ. ದಿನಕ್ಕೆ ಒಂದು ಟೊಮೊಟೋ ಸೇವಿಸಿದರೂ ಮಧುಮೇಹ ರೋಗವನ್ನು 60-70%ನಷ್ಟು ನಿಯಂತ್ರಿಸಬಹುದು ಎಂಬುದು ಸಂಶೋಧನೆಗಳ ಮೂಲಕ ಸಾಬೀತಾಗಿದೆ.

ಯೂರಿನರಿ ಇನ್‌ಫೆಕ್ಷನ್‌ಗಳನ್ನು ತಡೆಗಟ್ಟುವಲ್ಲಿ ಇದು ಬಹಳ ಸಹಕಾರಿಯಾಗಿದೆ. ಏಕೆಂದರೆ ಇದು ಮೂತ್ರನಾಳಗಳನ್ನು ಸ್ವಚ್ಛಗೊಳಿಸುತ್ತದೆ. ಮೂತ್ರ ತಡೆವುಂಟು ಮಾಡುವ ದೋಷಗಳನ್ನು ದೂರೀಕರಿಸುತ್ತದೆ. ಇದರಿಂದ ಮೂತ್ರ ವಿಸರ್ಜನೆ ಸರಾಗಗೊಳ್ಳುತ್ತದೆ. ಜೀರ್ಣಶಕ್ತಿ ಹೆಚ್ಚಿಸುವುದು ಸೇರಿದಂತೆ ನಮ್ಮ ದೇಹಕ್ಕೆ ಬೇಕಾಗುವ ಮಿನರಲ್‌ಗಳನ್ನು ಪೂರೈಸುವ ಇದು ಅಜೀರ್ಣತೆಯ ಕಾರಣಗಳನ್ನು ಮತ್ತು ಅದರ ದುಷ್ಪರಿಣಾಮಗಳನ್ನು ಹಿಂದಿಕ್ಕುತ್ತದೆ.



> **ಹೃದಯದ ಕಾಯಿಲೆಗಳಿಂದ ನರಳುತ್ತಿರುವವರು ಪ್ರತಿನಿತ್ಯ ಒಂದೆರಡು ಚಮಚದಷ್ಟಾದರೂ ಟೊಮೊಟೋ ರಸವನ್ನು ದಿನಾ ಕುಡಿಯುವುದು ಒಳ್ಳೆಯದು. ಕಿಡ್ನಿಯಲ್ಲಿ ತಲೆದೋರುವ ಕಲ್ಲು, ಹರಳುಗಳ ಸಂಗ್ರಹಣೆ ಮತ್ತು ಅದರ ವಿರೋಧ ಪರಿಣಾಮಗಳನ್ನು ಟೊಮಾಟೋ ತಡೆಯುತ್ತದೆ.**

### ಹೃದಯಕ್ಕೆ ಹಿತಕರ

ಹೃದಯದ ಕಾಯಿಲೆಗಳಿಂದ ನರಳುತ್ತಿರುವವರು ಪ್ರತಿನಿತ್ಯ ಒಂದೆರಡು ಚಮಚದಷ್ಟಾದರೂ ಟೊಮೊಟೋ ರಸವನ್ನು ದಿನಾ ಕುಡಿಯುವುದು ಒಳ್ಳೆಯದು. ಕಿಡ್ನಿಯಲ್ಲಿ ತಲೆದೋರುವ ಕಲ್ಲು, ಹರಳುಗಳ ಸಂಗ್ರಹಣೆ ಮತ್ತು ಅದರ ವಿರೋಧ ಪರಿಣಾಮಗಳನ್ನು ಟೊಮಾಟೋ ತಡೆಯುತ್ತದೆ. ಗೌರ ಮೈ ಬಣ್ಣ ಬಯಸುವವರು ಮತ್ತು ಮೊಡವೆಗಳಿಂದ ಉಪಶಮನ ಬಯಸುವವರು ಇದನ್ನು ದೈನಂದಿನ ಜೀವನದಲ್ಲಿ ಬಳಸಬಹುದು ಉದ್ದನೆಯ, ದಟ್ಟವಾದ ತಲೆ ಕೂದಲು ಬಯಸುವವರು ಟೊಮೊಟೋ ಜ್ಯೂಸ್ ಕುಡಿಯುವುದರಿಂದ ಕೂದಲಿನ ಬೆಳವಣಿಗೆಗೆ ಸಹಕಾರಿ ಮತ್ತು ಕೂದಲ ಬಣ್ಣ ಸಹ ಪ್ರಾಕೃತಿಕವಾಗುತ್ತದೆ.

### ಮೂಳೆಗೆ ಸಹಾಯಕ

ಆರೋಗ್ಯಕರ ಮೂಳೆಗಳ ಬೆಳವಣಿಗೆಗೆ ಇದು ಸಹಾಯ ಮಾಡುತ್ತದೆ. ರಕ್ತದಲ್ಲಿ ವಿಟಮಿನ್ 'ಸಿ'ಯ ಅಂಶವನ್ನು ಇದು ಹೆಚ್ಚಿಸುವುದರಿಂದ ನಮ್ಮ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ. ಇದು ರೋಗಾಣುಗಳು ನಮ್ಮ ದೇಹ ಪ್ರವೇಶಿಸದಂತೆ ತಡೆಯುತ್ತದೆ. ಮಾನಸಿಕ ಉದ್ವೇಗ ಅಥವಾ ಮಾನಸಿಕ ಒತ್ತಡ ಹೆಚ್ಚಾದಾಗ ಟೊಮೊಟೋ ರಸ ಸೇವನೆ ಬಹಳ ಉಪಶಮನಕಾರಿ. ಕಣ್ಣಿನ ಆರೋಗ್ಯಕ್ಕೆ ಇದರ ಸೇವನೆ ಪ್ರಯೋಜನಕಾರಿ. ಕಣ್ಣಿನ ಸಂಬಂಧಿ ದೃಷ್ಟಿದೋಷಗಳ ನಿವಾರಣೆಗೂ ಇದು ಸಹಕಾರಿ. ಏಕೆಂದರೆ ಬಿಟಾ ಕೆರಾಟಿನ್ ನ್ಯೂಟ್ರಿಯೆಂಟ್‌ಗಳ ಆಗರ ಈ ಟೊಮೊಟೋ. ಇರುಳುಗಣ್ಣು, ಕಣ್ಣಿನಲ್ಲಿ ಪೊರೆ, ಕಣ್ಣಿನಲ್ಲಿ ನೀರು ಸುರಿಯುವುದು ಮೊದಲಾದ ಸಮಸ್ಯೆಗಳಿಗೆ ಶೀಘ್ರ ಪರಿಹಾರ ದೊರೆಯುತ್ತದೆ.

### ದೇಹಕ್ಕೆ ವಿಟಮಿನ್ ಸಿ

ಅಮೆರಿಕಾದ ಹಾರ್ವರ್ಡ್ ಹೆಲ್ತ್ ಜರ್ನಲ್ ಪ್ರಕಾರ ಟೊಮೊಟೋ ಅಧಿಕವಾಗಿ ಬಳಸುವುದರಿಂದ ಸ್ಟ್ರೋಕ್ ಅಂದರೆ ಪಾರ್ಶ್ವ ವಾಯುವಿನಿಂದ ಉಂಟಾಗುವ ಅಪಾಯಗಳನ್ನು ಹಿಮ್ಮೆಟ್ಟಿಸಬಹುದು. ಏಕೆಂದರೆ ಇದರಲ್ಲಿ ಲೈಕೋಪಿನ್ ಅಧಿಕವಾಗಿದೆ. ಮಧುಮೇಹದಿಂದ ಬಳಲುತ್ತಿರುವವರು ಟೊಮೊಟೋವನ್ನು ಸೇವಿಸಲು ಹಿಂಜರಿಯಬಾರದು. ಸಂಶೋಧನೆಗಳ ಪ್ರಕಾರ ದಿನಕ್ಕೆ ಒಂದಾದರೂ ಟೊಮೊಟೋ ಸ್ವೀಕರಿಸುವುದು ಶೇ.40ರಷ್ಟು ವಿಟಮಿನ್ 'ಸಿ'ಯನ್ನು ದೇಹಕ್ಕೆ ಒದಗಿಸುತ್ತದೆ.

### ಸ್ತನ ಕ್ಯಾನ್ಸರ್‌ಗೆ ತಡೆ

ಪ್ರಾಸ್ಟೇಟ್ ಕ್ಯಾನ್ಸರ್‌ನ ಹಿಡಿದಿಡುವುದು ಇದರ ಮತ್ತೊಂದು ಹೆಚ್ಚುಗಾರಿಕೆ. ಏಕೆಂದರೆ ಇದರಲ್ಲಿ ಪ್ರಾಕೃತಿಕ ನಾರಿನಾಂಶವಿದೆ. ಸ್ತನ ಕ್ಯಾನ್ಸರ್ ತಡೆಯುವಲ್ಲಿ ಇದು ಸಹಕಾರಿ. ಜರ್ನಲ್ ಆಫ್ ನ್ಯಾಷನಲ್ ಕ್ಯಾನ್ಸರ್ ಇನ್ಸಿಟ್ಯೂಟ್‌ನ ಸಂಶೋಧನೆಗಳ ಪ್ರಕಟಣೆಗಳ ಪ್ರಕಾರ, ಇದರಲ್ಲಿರುವ ಆಂಟಿ ಆಕ್ಸಿಡೆಂಟ್‌ಗಳು ಕ್ಯಾನ್ಸರ್ ಕಾರಕ ರೋಗಾಣುಗಳನ್ನು ನಿಯಂತ್ರಿಸುತ್ತವೆ.

ಟೊಮಾಟೋವನ್ನು ಉಪಯೋಗಿಸುವ ಮೊದಲು ಚೆನ್ನಾಗಿ ತೊಳೆಯಬೇಕು. ಹೆಚ್ಚು ಬೇಯಿಸಬಾರದು. ತಾಜಾ ಟೊಮೊಟೋ ಸೇವನೆ ಒಳಿತು ಎಂಬುದನ್ನು ಅರಿತು ಉಪಯೋಗಿಸಿದರೆ ಒಳ್ಳೆಯ ಪರಿಣಾಮಗಳು ಶತಸಿದ್ಧ.

# ಆಯಾ ಗ್ರಾಮೀಣ ಅಭ್ಯರ್ಥಿ ಪರಿಗಣಿಸಿ

## ಜನತಾಧ್ವನಿ

ಮಾನ್ಯರೇ,

ಗ್ರಾಮಗಳ ಅಭಿವೃದ್ಧಿಯಾದರೆ ರಾಜ್ಯದ ಅಭಿವೃದ್ಧಿಯಾದಂತೆ. ಆದರೆ ಈಗ ಸರ್ಕಾರ ಗ್ರಾಮ ಪಂಚಾಯಿತಿಗೆ ಕಂಪ್ಯೂಟರ್ ಡಾಟಾ ಎಂಟ್ರಿ ಮಾಡಲು ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಕಂಪ್ಯೂಟರ್ ಡಾಟಾ ಎಂಟ್ರಿ ಹುದ್ದೆಗಳಿಗೆ ಅರ್ಜಿ ಕರೆದಿದೆ. ಇದು ಸಂತೋಷದ ವಿಷಯ.

ಈಗ ಹೊರಡಿಸಿರುವ ಸುತ್ತೋಲೆಯಲ್ಲಿ ಕರ್ನಾಟಕದಲ್ಲಿ ಯಾರು ಯಾವ ಪಂಚಾಯಿತಿಗೆ ಬೇಕಾದರೂ ಅರ್ಜಿ ಸಲ್ಲಿಸಬಹುದು ಎಂದು ಹೇಳಿದೆ. ಆದರೆ ಒಬ್ಬ ಅರ್ಜಿದಾರ 7 ರಿಂದ 8 ಗ್ರಾಮ ಪಂಚಾಯಿತಿಗಳಿಗೆ ಅರ್ಜಿ ಸಲ್ಲಿಸಿದ್ದಾರೆ. ಇದರಿಂದ ಗ್ರಾಮೀಣ ಭಾಗದ ವಿದ್ಯಾವಂತ ನಿರುದ್ಯೋಗಿಗಳಿಗೆ ಅನ್ಯಾಯವಾಗುತ್ತದೆ. ಸರ್ಕಾರ ಕೂಡಲೇ ಆಯಾಯ ಗ್ರಾಮ ಪಂಚಾಯಿತಿಗೆ ಒಳಪಟ್ಟಿರುವ ಗ್ರಾಮಗಳಲ್ಲಿರುವ ಆಯಾ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿಗಳಿಗೆ ಮೊದಲ ಆದ್ಯತೆಯನ್ನು ನೀಡುವುದರಿಂದ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದಂತಾಗುತ್ತದೆ.

ಈ ಪ್ರಕ್ರಿಯೆಗೆ ಅಭ್ಯರ್ಥಿಗಳ ವಾಸಸ್ಥಳ ದೃಢೀಕರಣ ಪತ್ರ ಮತ್ತು ಆಧಾರ ಕಾರ್ಡು ಕಡ್ಡಾಯ ಮಾಡಬೇಕು. ಆಗ ಮಾತ್ರ ಗ್ರಾಮ ಪಂಚಾಯಿತಿ ನೇಮಕಾತಿ ಪ್ರಕ್ರಿಯೆ ಪ್ರಾಮಾಣಿಕವಾಗಿರುತ್ತದೆ. ಇದರಿಂದ ಸರ್ಕಾರವು ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಈ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ, ಆರ್ಥಿಕ ಹಾಗೂ ಔದ್ಯೋಗಿಕ ಮಟ್ಟವನ್ನು ಸುಧಾರಿಸಲು ಸಹಕರಿಸಿದಂತಾಗುತ್ತದೆ. ಆದುದರಿಂದ ಸರ್ಕಾರ ಈ ವಿಷಯದ ಬಗ್ಗೆ ತ್ವರಿತವಾಗಿ ಗಮನ ಹರಿಸಬೇಕಾಗಿದೆ. ಗಾಂಧೀಜಿಯವರ ಗ್ರಾಮೀಣಾಭಿವೃದ್ಧಿ ಕನಸನ್ನು ನನಸಾಗಿಸಲು ಪ್ರಯತ್ನಿಸಬೇಕಾಗಿ ಕೋರಿಕೆ. ರಾಷ್ಟ್ರ, ರಾಜ್ಯಗಳ ಅಭಿವೃದ್ಧಿ ಗ್ರಾಮಗಳಲ್ಲಿದೆ. ಕೂಡಲೇ ಸಂಬಂಧಪಟ್ಟವರು ಇದನ್ನು ಪರಿಗಣಿಸಿ ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿ ಗ್ರಾಮಗಳ ಅಭ್ಯರ್ಥಿಗಳಿಗೇ ಅನುಕೂಲ ಕಲ್ಪಿಸಬೇಕು.

*-ಆರ್.ಪಿ.ವೆಂಕಟೇಶ್, ಗ್ರಾಮ ಪಂಚಾಯಿತಿ ಸದಸ್ಯರು, ಯಲಗುಂದ ಗ್ರಾಮ ಪಂಚಾಯಿತಿ, ಹಾಸನ ತಾಲ್ಲೂಕು.*